Mr. SPEAKER.—You cannot enter nto discussion. You can only ask for information.

Sri M. LINGANNA (Nanjangud).—May I know the total amount for annual repairs and special repairs that he District Board have requested Government to sanction?

Sri T. CHANNIAH.—It depends upon he amount available for allotment for hese repairs.

Sri M. LINGANNA.—May I know he total budgetary proposals that were ent by the District Board for annual epairs as well as special repairs?

Sri T. CHANNIAH.—If that informaion is to be furnished to the Hon'ble Member, I want notice.

Sri M. LINGANNA.—Is it a fact that he departmental head, the Commissioner for the Local Self-Government as drastically cut down the proposals of the District Board for annual repairs as well as special repairs?

Sri T. CHANNIAH.—Yes, that might be the reason, that is, sufficient amount was not available at its disposal and herefore they have reduced the amount.

Sri M. LINGANNA.—What are the outstanding dues from the Government o the Mysore District Board?

Sri T. CHANNIAH.—Notice.

ಶ್ರೀ ಬಿ. ರಾಚಯ್ಯ.—ಇತ್ತೀಚೆಗೇನಾದರೂ ಹೊಸ ವಾಗಿ ಸರ್ಕಾರದವರು ಈ ಜಿಲ್ಲಾ ಬೋರ್ಡುಗಳಿಗೆ ಕ್ಪೆಷಲ್ ಗ್ರಾಂಟುಗಳನ್ನು ಮಂಜೂರು ಮಾಡಿದ್ದಾ ರೆಯೇ?

ಶ್ರೀ ಟಿ. ಚನ್ನಯ್ಯ.—ಮೈಸೂರು ಜಿಲ್ಲಾ ಬೋರ್ಡಿ ನವರು ಸಾಲ ಕೇಳಿದ್ದಾರೆ, ಆ ಸಂಬಂಧವಾಗಿ ಅವರು ಅವರ ಪ್ರಪೋಜಲ್ಸ್ ಕಳುಹಿಸಿದ ಮೇಲೆ ಸರ್ಕಾರ ದವರು ಪರಿಶೀಲನೆ ಮಾಡಿ ಕೊಡುತ್ತೇವೆ.

ಶ್ರೀ ಬಿ. ರಾಚಯ್ಯ.—ಈಗಾಗಲೇ ಸರ್ಕಾರಕ್ಕೆ ಆ ಪ್ರಪೋಜಲ್ಸ್‌ಗಳು ಬಂದಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಇಲ್ಲ.

L. F. Dispensary, Chintamani (In-patients).

Q.—652.—Sri M. C. ANJANEYA REDDY (Chintamani).—

Will the Government be pleased to so state:—

(*a*) the number of in-patient beds in the Local Fund dispensaries for men and women in Chintamani.

(*b*) the number of in-patients that are now in the hospital;

(*c*) the amount sanctioned for supply of diet to these patients every year;

(*d*) the amount sanctioned for this year?

A.—Sri T. CHANNIAH.—(Minister for Public Health, and Local Self-Government).—

(*a*) Men ... 12 Beds.
Women ... 12 Beds.
(*b*) Men ... 32 patients.
Women ... 12 patients.
(*c*) Rs. 1,200.
(*d*) Rs. 2,000 for both sections.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಈಗ ತಾವು ಇಲ್ಲಿ ಸೂಚಿಸಿರತಕ್ಕ ಮೊಬಲಗು ಕಾಯಿಲೆಯಿಂದ ನರಳತಕ್ಕ ಆಸ್ಪತ್ರೆಯಲ್ಲಿ ಸೇರಿದ ಗಂಡನರೂ ಮತ್ತು ಹೆಂಗಸರು ಗಳಿಗೆಲ್ಲಾ ಇದು ಸೇರಿರುತ್ತದೆಯೇ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ತಾವು ಇಲ್ಲಿ ಸೂಚಿಸಿರತಕ್ಕ 12 ಬೆಡ್ಡುಗಳಿಗೂ ಇಷ್ಟೇನೇ ತಾವು ಒದಗಿಸಿರುವ ಡಯ್ಯಟ್ ಛಾರ್ಜು?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಒಂದೊಂದು ವಾರ್ಡಿನಲ್ಲೂ 32 ಜನ ರೋಗಿಗಳಿದ್ದಾರೆಂದು ಹೇಳಿ ದ್ದೀರಿ. ಅಷ್ಟು ಜನರಿಗೆ ಈ ಡಯ್ಯೆಟ್ ಸಾಕಾಗು ತ್ತದೆಯೇ?

ಶ್ರೀ ಟಿ. ಚನ್ನಯ್ಯ.—ನಾನು ಅಲ್ಲಿಗೆ ಹೋಗಿದ್ದಾಗ ಅಲ್ಲಿಯ ಒಟ್ಟು ರೋಗಿಗಳ ಸಂಖ್ಯೆ ಮೊದಲು 24 ಇತ್ತು. ಈಗ ಅದು 64ಕ್ಕೆ ಏರಿದೆ ಎಂದು ತಿಳಿದುಬಂದಿದೆ. ಅದ ಕ್ಕಾಗಿಯೇ ಇತ್ತೀಚೆಗೆ ಇನ್ನೂ 800 ರೂಪಾಯಿಗಳನ್ನು ಮೊದಲು ಕೊಟ್ಟಿದ್ದುದಕ್ಕಿಂತಲೂ, ಜಾಸ್ತಿಯಾಗಿ ಮಂಜೂರು ಮಾಡಿದ್ದೇವೆ. ಅದೂ ಸಾಲದೆಂದು ತಿಳಿಸಿದರೆ ಅದನ್ನು ಪುನಃ ಪರಿಶೀಲನೆ ಮಾಡಲಾಗು ತ್ತದೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಈಗ ತಾವು ಈ ಆಸ್ಪತ್ರೆಗೆ ಕೊಡುತ್ತಿರುವ ಡಯೆಟಿಂಗ್ ಛಾರ್ಜಿನ ರೇಟು ಬೇರೆ ಆಸ್ಪತ್ರೆಗಳಿಗೆ ಕೊಡುತ್ತಿರುವ ರೇಟಿಗೆ ಸರಿಸಮ ನಾಗಿದೆಯೇ?

ಶ್ರೀ ಟಿ. ಚನ್ನಯ್ಯ.—ಬೇರೆ ಆಸ್ಪತ್ರೆಗಳಿಗೆಲ್ಲಾ ಯಾವ ನಿಬಂಧನೆಗಳ ಮೇರೆಗೆ ಈ ಡಯೆಟಿಂಗ್ ಛಾರ್ಜನ್ನು ಕೊಡಲಾಗುತ್ತಿದೆಯೋ ಅದೇ ರೇಟನ್ನೇ ಚಿಂತಾಮಣಿ ಆಸ್ಪತ್ರೆಗೂ ಕೊಟ್ಟಿದೆ.

Drinking Water Wells in Nelamangala Taluk.

Q.—661. Sri D. M. GOVINDARAJU (Nelamangala).—

Will the Government be pleased to state:—

the number of drinking water wells needed in Nelamangala Taluk;

A.—Sri T. CHANNIAH.—(Minister for Public Health and Local Self-Government.—

41.

ಶ್ರೀ ಡಿ. ಎಂ. ಗೋವಿಂದರಾಜು.—ಈಗ ನೆಲಮಂಗಲ ತಾಲ್ಲೂಕಿಗೆ ಕೇವಲ 41 ಭಾವಿಗಳ ಅವಶ್ಯಕತೆ ಮಾತ್ರ ಇದೆ ಎಂದು ಹೇಳಿದ್ದೀರಿ. ಆದರೆ ಹೋದ ವರ್ಷ ಇದೇ ಪ್ರಶ್ನೆಗೆ ಉತ್ತರವಾಗಿ ತಾವು 150 ಬಾವಿಗಳ ಅವಶ್ಯಕತೆ ಅಲ್ಲದೆ ಎಂದು ಉತ್ತರ ಕೊಟ್ಟಿರಲಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಆಗ ಕೆಲವು ಹೊಸ ಪ್ರಪೋಲ್ಸ್ ಗಳಿದ್ದುವು. ಆಗ ಇನ್ನೂ ಕೆಲವು ಬೇರೆ ಗ್ರಾಮಗಳು ಸೇರಿದ್ದವು. ಆದುದರಿಂದ ಹಾಗೆ ಹೇಳಿತ್ತು.

ಶ್ರೀ ಡಿ. ಎಂ. ಗೋವಿಂದರಾಜು.—ಹಾಗಾದರೆ ಈಗ 41 ಬಾವಿಗಳು ಸಾಕೆಂದು ತಾವು ಹೇಳುತ್ತೀರಾ ?

ಶ್ರೀ ಟಿ. ಚನ್ನಯ್ಯ,—ಈಗ ನದ್ಯಕ್ಕೆ 41 ಬಾವಿಗಳಾದರೆ ಸಾಕೆಂದು ತಿಳಿದು ಬಂದಿದೆ.

ಶ್ರೀ ಡಿ. ಎಂ. ಗೋವಿಂದರಾಜು.—ಹೋದ ವರ್ಷ ಜಾಸ್ತಿ ಬಾವಿಗಳು ಬೇಕೆಂದು ತಾವೇ ಹೇಳಿದ್ದೀರಿ.

ಶ್ರೀ ಟಿ. ಚನ್ನಯ್ಯ,—ಅಲ್ಲಿಂದ ಆ ವಿಚಾರದಲ್ಲಿ ಯಾವ ಪ್ರಪೋಸಲ್ಸ್‌ಗಳೂ ಬಂದಿಲ್ಲ.

ಶ್ರೀ ಡಿ. ಎಂ. ಗೋವಿಂದರಾಜು.—ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿನ ಅನುಕೂಲಕ್ಕಾಗಿ ಯಾವುದಾದರೂ ಒಂದು ನೀತಿಯನ್ನು ಅನುಸರಿಸುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಅಧಿಕಾರಿಗಳ ಮುಖಾಂತರ proposal ಬಂದ ಪಕ್ಷದಲ್ಲಿ ಆಯಾ ಗ್ರಾಮಗಳಿಗೆ ಭಾವಿಗಳನ್ನು ಕೊಡಲಾಗುತ್ತದೆ. ಕುಡಿಯುವ ನೀರಿನ ಭಾವಿಗಳಿಗೆ priority basis ಮೇಲೆ ಮಂಜೂರಾತಿಯನ್ನು ಕೊಡಬೇಕೆಂಬುದೇ ಸರ್ಕಾರದ ನೀತಿ ಎಂದು ಸಂಬಂಧಪಟ್ಟ ಡೆಪ್ಯುಟಿ ಕಮಿಷನರ್‌ರವರಿಗೆ ಸೂಚನೆ ಕೊಡಲಾಗಿದೆ. ಮತ್ತು ಅವಕ್ಕೆ ಬೇಕಾಗುವ ಹಣವನ್ನೂ ಸಹ ಒದಗಿಸಲಾಗುತ್ತದೆ. ಒದಗಿಸಲಾದ ಹಣ ಮಾತ್ರ ಪೂರ್ತಿ ಖರ್ಚಾಗಿಲ್ಲ.

ಶ್ರೀ ಡಿ. ಎಂ. ಗೋವಿಂದರಾಜು.—ಕುಡಿಯುವ ನೀರಿನ ಬಾವಿಗಳನ್ನು ಎಷ್ಟು ವರ್ಷಗಳಲ್ಲಿ ಪ್ರತಿಯೊಂದು ಗ್ರಾಮಕ್ಕೂ ಒದಗಿಸುವುದಕ್ಕೆ ಸಾಧ್ಯವಾಗುತ್ತದೆ ?

ಶ್ರೀ ಟಿ. ಚನ್ನಯ್ಯ.—ಇಷ್ಟೇ ವರ್ಷಗಳಲ್ಲಿ ಎಲ್ಲಾ ಗ್ರಾಮಗಳಿಗೂ ಕುಡಿಯುವ ನೀರಿನ ಬಾವಿಗಳನ್ನು ಒದಗಿಸುತ್ತೇವೆ ಎಂದು ಖಚಿತವಾಗಿ ಹೇಳುವುದಕ್ಕೆ ಸಾಧ್ಯವಿಲ್ಲ. ಸಾಧ್ಯವಾದ ಮಟ್ಟಿಗೆ ಕೆಲವು ವರ್ಷಗಳಲ್ಲಿ ಪ್ರತಿಯೊಂದು ಗ್ರಾಮದಲ್ಲೂ ಕೂಡ ಕುಡಿಯುವ ನೀರಿನ ಬಾವಿಗಳನ್ನು ಕೊಡಬೇಕೆಂಬ ಉದ್ದೇಶ ಸಾರ್ಥಕವಾಗಲು ಸಾಧ್ಯವಾಗುವ ಪ್ರಯತ್ನಗಳನ್ನು ಮಾಡುತ್ತೇವೆ. ಇಷ್ಟೇ ವರ್ಷದೊಳಗೆ ಒದಗಿಸಿಕೊಡುತ್ತೇವೆಂದು ಖಚಿತವಾಗಿ ಹೇಳುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಡಿ. ಎಂ. ಗೋವಿಂದರಾಜು.—ಇನ್ನು 4-5 ವರ್ಷಗಳಲ್ಲಿ ಪ್ರತಿಯೊಂದು ಗ್ರಾಮಕ್ಕೂ ಕುಡಿಯುವ ನೀರಿನ ಸೌಕರ್ಯ ಒದಗಿಸುತ್ತೇವೆಂದು ಭರವಸೆ ಕೊಟ್ಟಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಭರವಸೆ ಕೊಟ್ಟಿದ್ದೇವೆ. ಅದಕ್ಕಾಗಿ ಸೂಕ್ತ ಕಾರ್ಯಕ್ರಮ ಕೈಕೊಂಡಿದ್ದೇವೆ. ಅನೇಕ ಸ್ಥಳಗಳಲ್ಲಿ ಕುಡಿಯುವ ನೀರಿನ ಬಾವಿಗಳನ್ನು ಮಂಜೂರುಮಾಡಿದ್ದರೂ ಕಂಟ್ರಾಕ್ಟರುಗಳು ದೊರಕದೆ ಕೆಲಸ ತೆಗೆದುಕೊಳ್ಳದೆ ನಿಧಾನವಾಗಿದೆ. ಆರು ತಿಂಗಳುಗಳಲ್ಲಿ ಆಗುವ ಬಾವಿಗೆ ಕೆಲವು ಗ್ರಾಮಗಳಲ್ಲಿ ಒಂದು ವರ್ಷ, ಕೆಲವು ಗ್ರಾಮಗಳಲ್ಲಿ ಎರಡು ವರ್ಷಗಳನ್ನು ತೆಗೆದುಕೊಂಡಿದ್ದಾರೆ, ಹೀಗೆ ನಿಧಾನವಾಗುತ್ತಿರುವುದರಿಂದ ಬಾವಿ ಕೆಲಸಗಳು ಮುಗಿಯುತ್ತಾ ಇಲ್ಲ.

Road from Karekal Anchemane to Bramhasandra.

Q.—673. Sri C. T. HANUMANTHAIAH (Pavagada-Scheduled Castes).—Will the Government be pleased to state :—

(*a*) when petitions were received praying for the construction of a road from Karekal Anchemane in Kora Hobli, Tumkur Taluk, to Bramhasandra *via* Chikkanahalli and Karenahalli since there is much hardship for cattle and cart movement ;

(*b*) the reason for not taking up the said road work so far ?

A.—Sri T. CHANNIAH (Minister for Public Health and Local Self-Government).—

(*a*) No petitions can be traced.

(*b*) Does not arise.

ಶ್ರೀ ಸಿ. ಟಿ. ಹನುಮಂತಯ್ಯ.—1948-49ನೇ ಸಾಲಿನಲ್ಲಿ ರೂರಲ್ ಡೆವಲಪ್‌ಮೆಂಟ್ ಕಮಿಟಿಯಲ್ಲಿ, ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕ್ ಕಮಿಟಿಗಳಲ್ಲಿ ಈ ರಸ್ತೆ ಮಾಡಿಸಿಕೊಡಬೇಕು ಎಂಬ ಚರ್ಚೆ ಬಂದುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಬಂದಿದೆ.

ಶ್ರೀ ಸಿ. ಟಿ. ಹನುಮಂತಯ್ಯ.—ಬಳ್ಳಾರಿ ರಸ್ತೆಯಿಂದ ಬ್ರಹ್ಮಸಂದ್ರ ಗ್ರಾಮದ ಕೆರೆಗೆ ಮೂರುಮೈಲಿ ದೂರವಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಇಲ್ಲ.

ಶ್ರೀ ಸಿ. ಟಿ. ಹನುಮಂತಯ್ಯ.—ಜನ ಜಾನುವಾರು ತಿರುಗಾಡುವುದಕ್ಕೆ ಕಷ್ಟವಾಗುತ್ತಿದೆ. ಜಾಗ್ರತೆ ಮಾಡಿಸಿಕೊಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಉತ್ತರದಲ್ಲಿ ಯಾವ ಅರ್ಜಿಯೂ ಬಂದಿಲ್ಲ ಎಂದು ಹೇಳಿದೆ.

ಶ್ರೀ ಸಿ. ಟಿ. ಹನುಮಂತಯ್ಯ.—ಸರ್ಕಾರದವರು ಈ ವಿಷಯವನ್ನು ವಿಚಾರಮಾಡುತ್ತಾರೆಯೇ ?

ಶ್ರೀ ಟಿ. ಚನ್ನಯ್ಯ.—ವಿಚಾರ ಮಾಡುತ್ತೇವೆ.

National Extension Schemes started in 1955.

Q.—281. Sri G. PAPANNA (Siddlaghatta-Chikballapur).—

Will the Government be pleased to state :—

(*a*) the places where the National Extension Scheme was started in the State since January 1955 ;